# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | : ಶ್ರೀ ಹೆಚ್. ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : 540 |
| ಉತ್ತರಿಸಬೇಕಾದ ದಿನಾಂಕ | : 11.12.2020. |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಬೀದರ್ ಜಿಲ್ಲೆಯಲ್ಲಿಯೇ ಪಶುಗಳಿಗೆ ಔಷಧ ಕೊರತೆ ಎದುರಾಗಿರುವ ದೂರುಗಳು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯಲ್ಲಿ ಜಾನುವಾರುಗಳ ಚಿಕಿತ್ಸೆಗೆ ಔಷಧಿಯ ಕೊರತೆ ಇರುವುದಿಲ್ಲ. |
| ಆ | ಬೀದರ್ ಜಿಲ್ಲೆಯ 114 ಪಶು ಆಸ್ಪತ್ರೆ ಮತ್ತು ಚಿಕಿತ್ಸಾ ಕೇಂದ್ರಗಳಲ್ಲಿ ಪಶು ಔಷಧಗಳ ತೀವ್ರ ಅಭಾವ ಉಂಟಾಗಿದ್ದು, ಬೆಂಗಳೂರಿನಿಂದ ಔಷಧಗಳ ಸರಬರಾಜು ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಆಯುಕ್ತಾಲಯದ ಔಷಧಿ ಭಂಡಾರದಿಂದ ಬೀದರ್ ಜಿಲ್ಲೆಗೆ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಿ ಸರಬರಾಜು ಮಾಡಲಾಗುತ್ತಿದೆ. |
| ಇ | ಬಂದಿದ್ದಲ್ಲಿ, ಗುಣಮಟ್ಟದ ಮತ್ತು ಹೆಚ್ಚಿನ ದರದ ಉತ್ತಮ ಪಶು ಔಷಧಗಿಳ ಸರಬರಾಜಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ: (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |
| ಈ | ಬೀದರ್ ಜಿಲ್ಲೆಯಲ್ಲಿ ಇಲಾಖೆಯ ಮಹತ್ವದ ಹುದ್ದೆಗಳು, ಪಶುವೈದ್ಯಾಧಿಕಾರಿ, ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗಳೂ ಸೇರಿದಂತೆ ಸುಮಾರು 156 ಪ್ರಮುಖ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಒಟ್ಟಾರೆ 185 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ವಿವಿಧ ವೃಂದಗಳ ಮಂಜೂರು, ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಉ | ಬಂದಿದ್ದಲ್ಲಿ, ಈ ಹುದ್ದೆಗಳ ಶೀಘ್ರ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು) | **ಮುಖ್ಯಪಶುವೈದ್ಯಾಧಿಕಾರಿಗಳು / ಹಿರಿಯ ಪಶುವೈದ್ಯಾಧಿಕಾರಿಗಳ ಹುದ್ದೆಗಳು:-**<br>ಜಿಲ್ಲೆಯಲ್ಲಿ ಒಟ್ಟು 09 ಹುದ್ದೆಗಳು ಖಾಲಿ ಇದ್ದು ಸದರಿ ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿರುವುದರಿಂದ ಕಾಲಮಿತಿ ಮುಂಬಡ್ತಿ ನೀಡಲು ಈಗಾಗಲೇ |

| | | |
|---|---|---|
| | | ಕ್ರಮವಹಿಸಲಾಗಿದ್ದು, ಪ್ರಸ್ತುತ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಿ ಕ್ರಮವಹಿಸಲಾಗಿರುತ್ತದೆ.<br><br>**ಪಶುವೈದ್ಯಾಧಿಕಾರಿಗಳ ಹುದ್ದೆಗಳು:-** ಜಿಲ್ಲೆಯಲ್ಲಿ 08 ಹುದ್ದೆಗಳು ಖಾಲಿಯಿದ್ದು, ರಾಜ್ಯದಲ್ಲಿ ಒಟ್ಟಾರೆ ಪಶುವೈದ್ಯಾಧಿಕಾರಿಗಳ 639 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಮುಖಾಂತರ ಭರ್ತಿ ಮಾಡುವ ಪ್ರಸ್ತಾವನೆಗೆ ಪ್ರಸ್ತುತ ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯು ಸಹಮತಿ ನೀಡಿರುವುದಿಲ್ಲ. ಆರ್ಥಿಕ ಇಲಾಖೆಯು ಸಹಮತಿ ನೀಡಿದ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮವಹಿಸಲಾಗುವುದು.<br>ಕಲ್ಯಾಣ-ಕರ್ನಾಟಕ ಅನುಚ್ಛೇದ-371(ಜೆ) ಅಡಿ 61 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದ್ದು ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ನೇಮಕಾತಿಗೆ ತಡೆಹಿಡಿದಿದ್ದು ಆರ್ಥಿಕ ಇಲಾಖೆ ಅನುಮತಿ ನೀಡಿದ ಕೂಡಲೇ ನೇಮಕಾತಿ ಮಾಡುವಾಗ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>**ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆ:** ಜಿಲ್ಲೆಯಲ್ಲಿ 03 ಖಾಲಿ ಹುದ್ದೆಗಳಿದ್ದು ಸದರಿ ಖಾಲಿ ಹುದ್ದೆಗಳನ್ನು ಜಾನುವಾರು ಅಧಿಕಾರಿ ಹುದ್ದೆಯಿಂದ ಮುಂಬಡ್ತಿ ಮುಖೇನ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>**ಜಾನುವಾರು ಅಧಿಕಾರಿ ಹುದ್ದೆ:** ಜಿಲ್ಲೆಯಲ್ಲಿ 01 ಖಾಲಿ ಹುದ್ದೆಗಳಿದ್ದು ಸದರಿ ಖಾಲಿ ಹುದ್ದೆಗಳನ್ನು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯಿಂದ ಮುಂಬಡ್ತಿ ಮುಖೇನ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>**ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆ:-** ಜಿಲ್ಲೆಯಲ್ಲಿ ಎಲ್ಲಾ ಹುದ್ದೆಗಳು ಭರ್ತಿಯಾಗಿರುತ್ತವೆ. |

| | | |
|---|---|---|
| | | **ಪಶುವೈದ್ಯಕೀಯ ಪರೀಕ್ಷಕರ ಹುದ್ದೆ:-** ಜಿಲ್ಲೆಯಲ್ಲಿ 03 ಖಾಲಿ ಹುದ್ದೆಗಳಿದ್ದು ಸದರಿ ಖಾಲಿ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಮುಂಬಡ್ತಿ ಮುಖೇನ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಹಾಗೂ ಕಲ್ಯಾಣ-ಕರ್ನಾಟಕ ಅನುಚ್ಛೇದ-371(ಜೆ) ಅಡಿ ನೇರನೇಮಕಾತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದ್ದು ಪ್ರಸ್ತುತ ಕೋವಿಡ್-19 ಹಿನ್ನಲೆಯಲ್ಲಿ ನೇಮಕಾತಿಗೆ ತಡೆಹಿಡಿದ್ದಿದ್ದು ಆರ್ಥಿಕ ಇಲಾಖೆ ಅನುಮತಿ ನೀಡಿದ ಕೂಡಲೇ ನೇಮಕಾತಿ ಮಾಡುವಾಗ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>**ಪಶುವೈದ್ಯಕೀಯ ಸಹಾಯಕರ ಹುದ್ದೆ:-** ಜಿಲ್ಲೆಯಲ್ಲಿ 01 ಖಾಲಿ ಹುದ್ದೆ ಇದ್ದು ಸದರಿ ಖಾಲಿ ಹುದ್ದೆಯನ್ನು 'ಡಿ' ದರ್ಜೆ ಹುದ್ದೆಯಿಂದ ಮುಂಬಡ್ತಿ ಮುಖೇನ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು. ಹಾಗೂ ಕಲ್ಯಾಣ-ಕರ್ನಾಟಕ ಅನುಚ್ಛೇದ-371(ಜೆ) ಅಡಿ ನೇರನೇಮಕಾತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದ್ದು ಪ್ರಸ್ತುತ ಕೋವಿಡ್-19 ಹಿನ್ನಲೆಯಲ್ಲಿ ನೇಮಕಾತಿಗೆ ತಡೆಹಿಡಿದ್ದಿದ್ದು ಆರ್ಥಿಕ ಇಲಾಖೆ ಅನುಮತಿ ನೀಡಿದ ಕೂಡಲೇ ನೇಮಕಾತಿ ಮಾಡುವಾಗ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು<br><br>**ಲಿಪಿಕ ವೃಂದದ ಹುದ್ದೆಗಳು:-** ಜಿಲ್ಲೆಯಲ್ಲಿ 02 ಹುದ್ದೆಗಳು ಖಾಲಿ ಇದ್ದು ಕಲ್ಯಾಣ-ಕರ್ನಾಟಕ ಅನುಚ್ಛೇದ-371(ಜೆ) ಅಡಿ ನೇರ ನೇಮಕಾತಿ ಹಾಗೂ ಅನುಕಂಪದ ಆಧಾರದ ಮೇಲೆ ನೌಕರಿ ನೀಡುವ ಸಂಧರ್ಭದಲ್ಲಿ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗಿದ್ದು ಪ್ರಸ್ತುತ ಕೋವಿಡ್-19 ಹಿನ್ನಲೆಯಲ್ಲಿ ನೇಮಕಾತಿಗೆ ತಡೆ ಇದ್ದು ಆರ್ಥಿಕ ಇಲಾಖೆ ಅನುಮತಿ ನೀಡಿದ ಕೂಡಲೇ ನೇಮಕಾತಿ ಮಾಡುವಾಗ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು. |

| | | |
|---|---|---|
| | | **ಲ್ಯಾಬ್ ಟೆಕ್ನೀಶಿಯನ್ ಹುದ್ದೆ**: ಜಿಲ್ಲೆಯಲ್ಲಿ 01 ಹುದ್ದೆ ಖಾಲಿ ಇದ್ದು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡುವ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿದೆ.<br>**ವಾಹನ ಚಾಲಕರ ಹುದ್ದೆಗಳು**: ಜಿಲ್ಲೆಯಲ್ಲಿ 7 ವಾಹನ ಚಾಲಕರ ಹುದ್ದೆಗಳು ಮಂಜೂರಾಗಿದ್ದು 2 ಹುದ್ದೆಗಳು ಖಾಲಿ ಇರುತ್ತವೆ. ಸದರಿ 2 ಖಾಲಿ ಹುದ್ದೆಗಳಿಗೆದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗಿದೆ.<br>**'ಡಿ' ದರ್ಜೆ ಹುದ್ದೆಗಳು:-** ಜಿಲ್ಲೆಯಲ್ಲಿ ಪ್ರಸ್ತುತ 155 ಹುದ್ದೆಗಳು ಖಾಲಿಯಿದ್ದು ಈ ಖಾಲಿ ಹುದ್ದೆಗಳಿಗೆ ಎದುರಾಗಿ 79 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗಿದೆ. |

**ಪಸಂಮೀ ಇ-313 ಸಲೆವಿ 2020**

ಪ್ರಭು ಬಿ. ಚವ್ಹಾಣ್

**ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,**

# ಅನುಬಂಧ

## ಬೀದರ ಜಿಲ್ಲೆಯ ತಾಲ್ಲೂಕುವಾರು ಎಲ್ಲಾ ವೃಂದದ ಸಿಬ್ಬಂದಿ ವಿವರಣಾ ಪಟ್ಟಿ ಇಲ್ಲಿಯವರೆಗೆ

| ಕ್ರ.ಸಂ | ಹುದ್ದೆ ಹೆಸರು | ಬೀದರ | | | ಭಾಲ್ಕಿ | | | ಬಸವಕಲ್ಯಾಣ | | | ಹುಮನಾಬಾದ | | | ಔರಾದ (ಬಿ) | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|
| | | ಮಂಜೂರು | ಭರ್ತಿ | ಖಾಲಿ | ಮಂಜೂರು | ಭರ್ತಿ | ಖಾಲಿ | ಮಂಜೂರು | ಭರ್ತಿ | ಖಾಲಿ | ಮಂಜೂರು | ಭರ್ತಿ | ಖಾಲಿ | ಮಂಜೂರು | ಭರ್ತಿ | ಖಾಲಿ | ಮಂಜೂರು | ಭರ್ತಿ | ಖಾಲಿ |
| 1 | ಉಪನಿರ್ದೇಶಕರು | 2 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 2 | 2 | 0 |
| 2 | ಮುಖ್ಯ ಪಶು ವೈದ್ಯಾಧಿಕಾರಿಗಳು | 5 | 4 | 1 | 3 | 3 | 0 | 3 | 3 | 0 | 3 | 2 | 1 | 3 | 2 | 1 | 17 | 14 | 3 |
| 3 | ಹಿರಿಯ ಪಶು ವೈದ್ಯಾಧಿಕಾರಿಗಳು | 4 | 4 | 0 | 5 | 4 | 1 | 5 | 1 | 4 | 5 | 4 | 1 | 4 | 4 | 0 | 23 | 17 | 6 |
| 4 | ಪಶುವೈದ್ಯಾಧಿಕಾರಿಗಳು | 16 | 16 | 0 | 18 | 17 | 1 | 14 | 11 | 3 | 19 | 15 | 4 | 14 | 14 | 0 | 81 | 73 | 8 |
| 5 | ಜಾ.ಅಭಿವೃದ್ಧಿ. ಅಧಿಕಾರಿ | 3 | 3 | 0 | 1 | 1 | 0 | 1 | 0 | 1 | 1 | 0 | 1 | 1 | 0 | 1 | 7 | 4 | 3 |
| 6 | ಜಾನುವಾರು ಅಧಿಕಾರಿ | 4 | 3 | 1 | 5 | 5 | 0 | 5 | 5 | 0 | 6 | 6 | 0 | 4 | 4 | 0 | 24 | 23 | 1 |
| 7 | ಹಿರಿಯ ಪಶು ವೈದ್ಯಕೀಯ ಪರೀಕ್ಷಕರು | 7 | 7 | 0 | 7 | 7 | 0 | 1 | 1 | 0 | 4 | 4 | 0 | 2 | 2 | 0 | 21 | 21 | 0 |
| 8 | ಪಶುವೈದ್ಯಕೀಯ ಪರೀಕ್ಷಕರು | 11 | 11 | 0 | 12 | 12 | 0 | 13 | 12 | 1 | 15 | 14 | 1 | 14 | 13 | 1 | 65 | 62 | 3 |
| 9 | ಪಶುವೈದ್ಯಕೀಯ ಸಹಾಯಕರು | 9 | 8 | 1 | 9 | 9 | 0 | 3 | 3 | 0 | 6 | 6 | 0 | 4 | 4 | 0 | 31 | 30 | 1 |
| 10 | ಲ್ಯಾಬ್ ಟೆಕ್ನೀಷಿಯನ್ | 1 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 1 |
| 11 | ಸಹಾಯಕ ಆಡಳಿತ ಅಧಿಕಾರಿಗಳು | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 |
| 12 | ಅಧೀಕ್ಷಕರು | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 |
| 13 | ಪ್ರ. ದ. ಸಹಾಯಕರು | 4 | 3 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 4 | 3 | 1 |
| 14 | ದ್ವಿ. ದ. ಸಹಾಯಕರು | 2 | 2 | 0 | 1 | 1 | 0 | 1 | 1 | 0 | 1 | 1 | 0 | 1 | 1 | 0 | 6 | 6 | 0 |
| 15 | ಬೆರಳಚ್ಚುಗಾರರು | 1 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 1 |
| 16 | ವಾಹನ ಚಾಲಕರು | 3 | 2 | 1 | 1 | 0 | 1 | 1 | 1 | 0 | 1 | 1 | 0 | 1 | 1 | 0 | 7 | 5 | 2 |
| 17 | ಡಿ-ದರ್ಜೆ ನೌಕರರು | 44 | 14 | 30 | 43 | 13 | 30 | 38 | 10 | 28 | 48 | 11 | 37 | 39 | 9 | 30 | 212 | 57 | 155 |
| | ಒಟ್ಟು | 118 | 81 | 37 | 105 | 72 | 33 | 85 | 48 | 37 | 109 | 64 | 45 | 87 | 54 | 33 | 504 | 319 | 185 |